2018 ಕ.ತೀ.ವ 888

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಶ್ರೀ ರಿಯಾಜ್ ಅಹಮ್ಮದ್ ಅಬ್ದುಲ್ ಸತ್ತಾರ್ ನಾಗರಚಿ –ವಿರುದ್ಧ–
ಕುಮಾರಿ ಶಿಫಾ ಹಾಗೂ ಇನ್ನೊಬ್ಬರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 26ನೇ ಕ್ರಮಾದೇಶದ 10(ಎ) ನಿಯಮದೊಂದಿಗೆ ಓದಲಾದ 151ನೇ ಪ್ರಕರಣ.

ಮತ್ತು

ಭಾರತ ಸಾಕ್ಷ್ಯ ಅಧಿನಿಯಮದ, 1872ರ 45ನೇ ಪ್ರಕರಣ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ವಾದಿಯಾಗಿರುವ ಅರ್ಜಿದಾರನು, 1ನೇ ಪ್ರತಿವಾದಿಯ ಪಿತೃತ್ವವನ್ನು ನಿರ್ಣಯಿಸುವುದಕ್ಕೆ ವಾದಿ ಮತ್ತು 2ನೇ ಪ್ರತಿವಾದಿಯ ಡಿಎನ್ಎ ಪರೀಕ್ಷೆಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣವನ್ನು ಓದಿಕೊಂಡು ಕ್ರಮಾದೇಶ 26 ನಿಯಮ 10(ಎ) ಮತ್ತು ಭಾರತ ಸಾಕ್ಷ್ಯ ಅಧಿನಿಯಮದ ಪ್ರಕರಣ 45ರ ಅಡಿಯಲ್ಲಿ ಸಲ್ಲಿಸಿದ ಅವನ ಅರ್ಜಿಯನ್ನು ತಿರಸ್ಕರಿಸಿ ಕೌಟುಂಬಿಕ ನ್ಯಾಯಾಲಯ, ಬೆಳಗಾಂ ಇವರು ಮಾಡಿದ ಆದೇಶ ದಿನಾಂಕ 21.11.2015ನ್ನು ರದ್ದುಪಡಿಸಲು ಸರ್ಷಿಯೋರರಿ ರಿಟ್‌ಗಾಗಿ ಮೇಲ್ಕಂಡ ರಿಟ್ ಅರ್ಜಿಯನ್ನು ದಾಖಲು ಮಾಡಿದ್ದಾನೆ.

ಡೀ ಆಕ್ಸಿರೈಬೊನ್ಯೂಕ್ಲೀಯಿಕ್ ಆಸಿಡ್ (ಡಿಎನ್ಎ) ಪರೀಕ್ಷೆಯಿಂದ ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಯೋಜಿಸಲಾದ

*ರಿಟ್ ಅರ್ಜಿ ಸಂಖ್ಯೆ: 114645/2015 (ಜಿಎಂ–ಎಫ್‌ಸಿ), ದಿನಾಂಕ: 8ನೇ ಜನವರಿ, 2016.

ನಿರ್ಣಾಯಕ ಪೂರ್ವಭಾವನೆಯುನ್ನು ಖಂಡಿಸಲಾಗುವುದಿಲ್ಲ. ಪಕ್ಷಕಾರರು, ಸಂಪರ್ಕವಿರಲಿಲ್ಲವೆಂಬುದನ್ನು ರುಜುವಾತುಪಡಿಸುವ ಮೂಲಕ ಮಾತ್ರ ಅಂಥ ನಿರ್ಣಾಯಕ ಪೂರ್ವಭಾವನೆಯ ಕಾಠಿಣ್ಯದಿಂದ ತಪ್ಪಿಸಿಕೊಳ್ಳಬಹುದಾಗಿದ್ದು, ಅದು ನಕಾರಾತ್ಮಕ ರುಜುವಾತಾಗಿದೆ. ನಿಜವಾಗಿ, ಭಾರತ ಸಾಕ್ಷ್ಯ ಅಧಿನಿಯಮದ 4ನೇ ಪ್ರಕರಣದೊಂದಿಗೆ ಓದಿಕೊಂಡ 112ನೇ ಪ್ರಕರಣವು, ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಮೂಲಕ ವಹಿಸಲಾದ ಮಗುವಿನ ವಿಧಿಸಮ್ಮತ ಮತ್ತು ಪಿತೃತ್ವದ ನಿರ್ಣಾಯಕ ರುಜುವಾತಾಗಿದೆಯೆಂದು ಹೇಳಲಾದ ಕಾನೂನು ಸಂಗತಿಗೆ ಸಂಬಂಧಿಸಿದಂತೆ ಯಾವುದೇ  ಸಾಕ್ಷ್ಯವನ್ನು ಮಂಡಿಸುವುದರಿಂದ ಪಕ್ಷಕಾರನನ್ನು ಪೂರ್ಣವಾಗಿ ಅನರ್ಹಗೊಳಿಸುವ ಹಾಗೂ ಸಾಕ್ಷ್ಯವನ್ನು ಮುಕ್ತಾಯಗೊಳಿಸುವ ಪರಿಣಾಮವನ್ನು ಹೊಂದಿದೆ, ಪಕ್ಷಕಾರರು ವಿವಾಹವಾಗಿರುವಾಗ, ಪರಸ್ಪರ ಸಂಪರ್ಕದಲ್ಲಿದ್ದಾಗ  ರಕ್ತ ಗುಂಪು ಪರೀಕ್ಷೆಗೆ ಆದೇಶಿಸುವುದು ಭಾರತ ಸಂವಿಧಾನದ 21ನೇ ಅನುಚ್ಛೇದದ ಅಡಿಯಲ್ಲಿ ಹಕ್ಕನ್ನು ಉಲ್ಲಂಘಿಸುತ್ತದೆ.

ಅಂಗೀಕರಿಸಲಾದಂತೆ, ವಾದಿ ಮತ್ತು 2ನೇ ಪ್ರತಿವಾದಿಯ ನಡುವೆ ವಿವಾಹವನ್ನು ದಿನಾಂಕ 20.05.2007 ರಂದು ನಡೆಸಲಾಗಿದೆ ಮತ್ತು ವಿಧಿಸಮ್ಮತ ವಿವಾಹವು ಅಸ್ತಿತ್ವದಲ್ಲಿರುವಾಗ, 1ನೇ ಪ್ರತಿವಾದಿಯು, ದಿನಾಂಕ 09.10.2009 ರಂದು ಜನಿಸಿದ್ದಾರೆ. ಕೌಟುಂಬಿಕ ನ್ಯಾಯಾಲಯವು, ದಿನಾಂಕ 05.06.2012 ರಂದು ಪ್ರತಿವಾದಿಗಳಿಗೆ ಜೀವನಾಂಶ ನೀಡಿದೆ ಮತ್ತು ಪ್ರತಿವಾದಿಗಳು. ವಾದಿಯ ಪತ್ನಿ ಮತ್ತು ಮಗಳಾಗಿದ್ದಾರೆಂದು ಅಭಿಪ್ರಾಯಪಟ್ಟು ಅದನ್ನು ಆರ್‌ಪಿಎಫ್‌ಸಿ ಸಂ.308/2012 ರಲ್ಲಿ ಈ ನ್ಯಾಯಾಲಯದಿಂದ ಸ್ಥಿರೀಕರಿಸಲಾಗಿದೆ. ಈ ತೀರ್ಮಾನವು ಅಂತಿಮವಾಗಿದೆ ಮತ್ತು ನಿರ್ಣಾಯಕವಾಗಿದೆ ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರನು, ಅವನ ಪತ್ನಿ ಎಂದರೆ 2ನೇ ಪ್ರತಿವಾದಿಯೊಂದಿಗೆ ಅವನು ಸಂಪರ್ಕಿಸಿರುವುದಿಲ್ಲ ಮತ್ತು 1ನೇ ಪ್ರತಿವಾದಿಯು, ಅವನು ಮತ್ತು 2ನೇ ಪ್ರತಿವಾದಿ ಪತ್ನಿ ನಡುವಿನ ವಿವಾಹದಿಂದ ಜನಿಸಿಲ್ಲವೆಂಬುದನ್ನು ರುಜುವಾತುಪಡಿಸುವ ಯಾವುದೇ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.

ಒಪ್ಪಿತ ಸಂಗತಿಗಳ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯ, ಪಕ್ಷಕಾರರ ನಡುವಿನ ವಿಧಿಸಮ್ಮತ ವಿವಾಹ, ಮಗುವಿನ ಜನನದ ದಿನಾಂಕದಂದು ಅಸ್ತಿತ್ವದಲ್ಲಿದ್ದು, ಮತ್ತು ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತೆ

ನಿರ್ಣಾಯಕ ಪೂರ್ವಭಾವನೆ ಮೇಲೆ ಅವಲಂಬಿಸಿದೆ ಮತ್ತು ಅವನು, ಆ ಸುಸಂಬದ್ಧ ಅವಧಿಯಲ್ಲಿ ವಿಧಿಸಮ್ಮತ ವಿವಾಹ ಅಸ್ತಿತ್ವದಲ್ಲಿರುವ ಸಮಯದಲ್ಲಿ ಅವನು ಪತ್ನಿಯನ್ನು ಸಂಪರ್ಕಿಸಿರಲಿಲ್ಲವೆಂಬುದನ್ನು ರುಜುವಾತುಪಡಿಸಲು ಪತಿಯು ವಿಫಲನಾಗಿದ್ದಾನೆಯೆಂದು ಅಧಿವಿಚಾರಣಾ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಪ್ರಸ್ತುತ ಪ್ರಕರಣದಲ್ಲಿ, ವಾದಿ ಮತ್ತು 2ನೇ ಪ್ರತಿವಾದಿಯ ನಡುವೆ ವಿಧಿಸಮ್ಮತ ವಿವಾಹ ಇರುವ ದೃಷ್ಟಿಯಿಂದ, 1ನೇ ಪ್ರತಿವಾದಿಯು, ಹುಟ್ಟಿದ್ದು, ಅರ್ಜಿದಾರನು ಈ ಅರ್ಜಿಯನ್ನು ಪುರಸ್ಕರಿಸುವ ಯಾವುದೇ ವಿಶೇಷ ಸಂದರ್ಭಗಳನ್ನು ನೀಡಿ ವಾದಿಸಿರುವುದಿಲ್ಲ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯ ಮಾಡಿದ ಪ್ರಶ್ನಿತ ಆದೇಶವು, ನ್ಯಾಯಸಮ್ಮತ ಮತ್ತು ಯುಕ್ತವಾಗಿದ್ದು, ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿ ಹಸ್ತಕ್ಷೇಪ ಮಾಡಲಾಗದು. ಅದಕ್ಕನುಸಾರವಾಗಿ ಈ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 2014 ಎಐಆರ್ ಎಸ್‌ಸಿಡಬ್ಲ್ಯೂ 506<br>ನಂದಲಾಲ್ ವಸುಡಿಯೋ ಬದ್ವೈಕ್ –ವಿರುದ್ಧ–<br>ಲತಾ ನಂದಲಾಲ್ ಬದ್ವೈಕ್ ಹಾಗೂ ಇನ್ನೊಬ್ಬರು* | *(ಉಲ್ಲೇ) 11* |
| *2. ಎಐಆರ್ 1934 ಪಿಸಿ 49<br>ಕರಪಾಯ ಸರ್ವೈ –ವಿರುದ್ಧ– ಮಾಯಂಡಿ* | *(ಉಲ್ಲೇ) 22* |
| *3. ಎಐಆರ್ 1954 ಎಸ್‌ಸಿ 176<br>ಚೆಲಕುರಿ ವೆಂಕಟೇಶ್ವರಲು–ವಿರುದ್ಧ–<br>ಚೆಲುಕುರಿ ವೆಂಕಟನಾರಾಯಣ* | *(ಉಲ್ಲೇ) 22* |
| *4. ಎಐಆರ್ 1993 ಎಸ್‌ಸಿ 2295<br>ಗೌತಮ್ ಕುಂದು–ವಿರುದ್ಧ–<br>ಪಶ್ಚಿಮ ಬಂಗಾಳ ಸರ್ಕಾರ* | *(ಉಲ್ಲೇ) 23* |

ಅರ್ಜಿದಾರರ ಪರ ಶ್ರೀ ಜಿ.ಬಿ. ನಾಯಕ್ ಮತ್ತು ಶ್ರೀಮತಿ ಪಿ.ಜಿ. ನಾಯಕ್– ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಬಿ. ವೀರಪ್ಪ:**

ಅಧಿವಿಚಾರಣಾ ನ್ಯಾಯಾಲಯದಲ್ಲಿ ವಾದಿಯಾಗಿರುವ ಅರ್ಜಿದಾರನು, 1ನೇ ಪ್ರತಿವಾದಿಯ ಪಿತೃತ್ವವನ್ನು ನಿರ್ಣಯಿಸುವುದಕ್ಕೆ ವಾದಿ ಮತ್ತು 2ನೇ ಪ್ರತಿವಾದಿಯ ಡಿಎನ್‌ಎ ಪರೀಕ್ಷೆಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣವನ್ನು ಓದಿಕೊಂಡು ಕ್ರಮಾದೇಶ 26 ನಿಯಮ 10(ಎ) ಮತ್ತು ಭಾರತ ಸಾಕ್ಷ್ಯ ಅಧಿನಿಯಮದ ಪ್ರಕರಣ 45ರ ಅಡಿಯಲ್ಲಿ ಸಲ್ಲಿಸಿದ ಅವನ ಅರ್ಜಿಯನ್ನು ತಿರಸ್ಕರಿಸಿ ಕೌಟುಂಬಿಕ ನ್ಯಾಯಾಲಯ, ಬೆಳಗಾಂ ಇವರು ಮಾಡಿದ ಆದೇಶ ದಿನಾಂಕ 21.11.2015ನ್ನು ರದ್ದುಪಡಿಸಲು ಸರ್ಷಿಯೋರರಿ ರಿಟ್‌ಗಾಗಿ ಮೇಲ್ಕಂಡ ರಿಟ್ ಅರ್ಜಿಯನ್ನು ದಾಖಲು ಮಾಡಿದ್ದಾನೆ.

2. ವಾದಿ ಮತ್ತು 2ನೇ ಪ್ರತಿವಾದಿ ಪತಿ ಮತ್ತು ಪತ್ನಿಯಾಗಿದ್ದಾರೆ ಹಾಗೂ ಮುಸ್ಲಿಮ್ ಸಮುದಾಯದ ರೂಢಿಗತ ಸಂಸ್ಕಾರಗಳು ಮತ್ತು ಆಚಾರಗಳ ಪ್ರಕಾರ, ಗೋಕಾಕ್ ಪಾಲ್ಸ್‌ನಲ್ಲಿ ದಿನಾಂಕ 20.05.2007 ರಂದು ಅವರ ವಿವಾಹವನ್ನು ನಡೆಸಲಾಗಿದೆಯೆಂದು ವಾದಿಸುವುದರೊಂದಿಗೆ ವಾದಿಯೊಂದಿಗೆ ವಿವಾಹದಿಂದ ಶಹನಾಜ್ / 2ನೇ ಪ್ರತಿವಾದಿಗೆ ಶಿಫಾ ಜನಿಸಿರುವುದಿಲ್ಲವಾದ್ದರಿಂದ, 1ನೇ ಪ್ರತಿವಾದಿ ಶಿಫಾ, ವಾದಿಯ ಮಗಳಾಗಿರುವುದಿಲ್ಲವೆಂದು ಘೋಷಿಸಿ, ಘೋಷಣೆಗಾಗಿ ಅರ್ಜಿದಾರನು ದಾವೆಯನ್ನು ದಾಖಲು ಮಾಡಿದ್ದಾನೆ. ವಿವಾಹವಾದ ಹೊಸದರಲ್ಲಿ, 2ನೇ ಪ್ರತಿವಾದಿ/ ಪತ್ನಿಯು ಅವನೊಂದಿಗೆ ಎರಡು ವಾರಗಳಿಗಿಂತ ಕಡಿಮೆ ಅವಧಿ ಸಂತೋಷವಾಗಿ ಒಟ್ಟಿಗೆ ಜೀವನ ನಡೆಸಿದ್ದಾರೆ ಹಾಗೂ ಯಾವುದೇ ಕಾರಣವಿಲ್ಲದೇ ವಿವಾಹವಾದ ಮನೆಯನ್ನು ಪತ್ನಿಯು ತೊರೆದಿದ್ದಾಳೆ ಹಾಗೂ ವಾದಿಗೆ ಆ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಆಕೆಯು, ಹಿಂದಿರುಗಿ ಬಂದಿರುವುದಿಲ್ಲ ಮತ್ತು 2ನೇ ಪ್ರತಿವಾದಿ/ ಪತ್ನಿಯಿಂದ ಯಾವ ಸಮಾಚಾರವೂ ತಿಳಿಯದಿದ್ದ ಕಾರಣದಿಂದ ಹಿರಿಯರು ಮತ್ತು

ಅವನ ತಂದೆ ಹಾಗೂ 'ಜಮಾತ್'ನ ಸದಸ್ಯರು ಆ ಬಗ್ಗೆ ತಿಳಿಯಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದ್ದಾರೆ. ಆದರೆ ಅದು ವ್ಯರ್ಥವಾಗಿದೆ. ವಾದಿ ಮತ್ತು ಅವನ ಪತ್ನಿಯು ಜೂನ್ 2007 ರ ಕೊನೆಯ ವಾರದಿಂದ ಅರ್ಜಿಯನ್ನು ದಾಖಲು ಮಾಡಿದ ದಿನಾಂಕದವರೆಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಅವರು ಪರಸ್ಪರ ಭೇಟಿಯಾಗಿಲ್ಲ. ಪತ್ನಿಯು ಮಗು ಶಿಫಾ ದಿನಾಂಕ 09.10.2009 ರಂದು ತನಗೆ ಜನಿಸಿದ್ದಾಳೆಂದು ಹೇಳಿದ್ದು ಕೌಟುಂಬಿಕ ನ್ಯಾಯಾಲಯದ ಮುಂದೆ ಕ್ರಿಮಿನಲ್ ಸಂಕೀರ್ಣ ಸಂ.330/2010ನ್ನು ದಾಖಲು ಮಾಡಿದ್ದಾಳೆ ಮತ್ತು ಹೆಣ್ಣು ಮಗು ಜನಿಸಿದ್ದಕ್ಕೆ ಸಂಬಂಧಪಟ್ಟಂತೆ ಸದರಿ ಶಹನಾಜ್ ಅಥವಾ ಆಕೆಯ ಕುಟುಂಬ ಸದಸ್ಯರು ವಾದಿಗೆ ಹೇಳಿರುವುದಿಲ್ಲ ಅಥವಾ ವಿಷಯ ತಿಳಿಸಿರುವುದಿಲ್ಲ ಮತ್ತು ಜೀವನಾಂಶ ಅರ್ಜಿಗಾಗಿ ನೋಟೀಸನ್ನು ಸ್ವೀಕರಿಸಿದ ಮೇಲೆ ಮೊದಲನೇ ಸಲ ಅದನ್ನು ಅವನು ತಿಳಿದುಕೊಂಡಿದ್ದಾನೆಯೆಂದು ಸಹ ವಾದಿಸಲಾಗಿದೆ. ಅಷ್ಟೇ ಅಲ್ಲದೆ, ವಾದಿ ಮತ್ತು ಅವನ ಪತ್ನಿಯು ಜೂನ್ 2007 ರಿಂದ ಪರಸ್ಪರ ಭೇಟಿಯಾಗಿಲ್ಲ. ಹಾಗಾಗಿ ವಾದಿ ಮತ್ತು 2ನೇ ಪ್ರತಿವಾದಿ/ಪತ್ನಿಯ ವಿವಾಹದಿಂದ ಮಗು ಜನಿಸಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದ್ದರಿಂದ, 1ನೇ ಪ್ರತಿವಾದಿಯು, ವಾದಿಯ ಮಗಳೇ ಅಲ್ಲವೆಂದು ವಾದಿಯು ವಾದಿಸಿದ್ದಾನೆ. ವಾಸ್ತವವಾಗಿ ವಾದಿಯು, ತನ್ನ ಮತ್ತು 2ನೇ ಪ್ರತಿವಾದಿಯ ಸಂಬಂಧವನ್ನು ಅಲ್ಲಗಳೆದಿದ್ದಾನೆ ಹಾಗೂ ಅದನ್ನು ದಿನಾಂಕ 02.08.2010 ರಿಂದ ಆಕೆಯ ಮರುವಿವಾಹವಾದ ದಿನಾಂಕದವರೆಗೆ ಪ್ರತಿ ತಿಂಗಳು 750/– ರೂಪಾಯಿಗಳ ಜೀವನಾಂಶವನ್ನು ಮಂಜೂರು ಮಾಡುವಾಗ ಕೌಟುಂಬಿಕ ನ್ಯಾಯಾಲಯವು ಒಪ್ಪಿಕೊಂಡಿರುವುದಿಲ್ಲ ಮತ್ತು ಈ ನ್ಯಾಯಾಲಯದ ಮುಂದೆ ಅವನು ದಾಖಲು ಮಾಡಿದ ಪರಿಷ್ಕರಣಾ ಅರ್ಜಿಯನ್ನು, ಸಹ ಕೌಟುಂಬಿಕ ನ್ಯಾಯಾಲಯದಿಂದ ಮಾಡಿದ ಆದೇಶವನ್ನು ಸ್ಥಿರೀಕರಿಸಿ ವಜಾಗೊಳಿಸಲಾಯಿತು.

3. ಅರ್ಜಿದಾರನು ಮುಂದುವರೆದು, ತನ್ನ ಪತ್ನಿ ಶಹನಾಜ್, ಬೇರೊಬ್ಬ ಪುರುಷನೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿದ್ದಾಳೆ ಮತ್ತು 1ನೇ ಪ್ರತ್ಯರ್ಜಿದಾರಳು, ಅಕ್ರಮ ಸಂಬಂಧದಿಂದ ಜನಿಸಿದ್ದಾಳೆಂದು ತನಗೆ ತಿಳಿದು ಬಂದಿದೆಯೆಂದು ವಾದಿಸಿದ್ದಾನೆ. ಪತ್ನಿಯು ತನಗೆ ಮತ್ತು ಮಗುವಿಗೆ ಜೀವನಾಂಶ

ಇತ್ಯಾದಿಗಾಗಿ ಅರ್ಜಿಯನ್ನು ದಾಖಲು ಮಾಡಿದ್ದಾಳೆ. ಆದ್ದರಿಂದ, ಅವನು, ಮನವಿಯಂತೆ ಘೋಷಣೆಗಾಗಿ ಕೋರಿದ್ದಾನೆ.

4. ಪ್ರತ್ಯರ್ಜಿದಾರ/2ನೇ ಪ್ರತಿವಾದಿ, ಲಿಖಿತ ಹೇಳಿಕೆಯನ್ನು ದಾಖಲಿಸಿದ್ದಾರೆ. ವಾದಪತ್ರದ ದೃಢೋಕ್ತಿಗಳನ್ನು ಅಲ್ಲಗಳೆಯಲಾಗಿದೆ. ಸಂಬಂಧ ಮತ್ತು ವಿವಾಹವನ್ನು ಒಪ್ಪಿಕೊಂಡಿದ್ದು, 1ನೇ ಪ್ರತಿವಾದಿಯು, ವಾದಿಯೊಂದಿಗಿನ ವಿವಾಹದಿಂದ ಜನಿಸಿದ್ದಾಳೆಂದು 2ನೇ ಪ್ರತಿವಾದಿಯು ನಿರ್ದಿಷ್ಟವಾಗಿ ವಾದಿಸಿದ್ದಾರೆ ಮತ್ತು ಕ್ರಿಮಿನಲ್ ಸಂಕೀರ್ಣ ಸಂ.330/2010 ರಲ್ಲಿ ಕೌಟುಂಬಿಕ ನ್ಯಾಯಾಲಯದಿಂದ ಮಾಡಿದ ಆದೇಶದ ಕಾರಣದಿಂದ ಜೀವನಾಂಶದ ಸಂದಾಯವನ್ನು ತಪ್ಪಿಸುವ ಉದ್ದೇಶದೊಂದಿಗೆ ಪ್ರತಿವಾದಿಗಳ ವಿರುದ್ಧ ವಾದಿಯು ದಾವೆ ಹೂಡಿದ್ದಾನೆ ಮತ್ತು ವಾದಿಯು, ಶುದ್ಧಹಸ್ತದಿಂದ ಈ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಮತ್ತು ಈ ಪ್ರಕರಣದ ಎಲ್ಲಾ ಮುಖ್ಯ ಸಂಗತಿಗಳನ್ನು ದಮನ ಮಾಡಿದ್ದಾನೆಂದು ಸಹ ನಿರ್ದಿಷ್ಟವಾಗಿ ವಾದಿಸಿದ್ದಾರೆ.

5. ವಾದಿ ಮತ್ತು 2ನೇ ಪ್ರತಿವಾದಿ ಶಹನಾಜ್ ಆಲಿಯಾಸ್ ತಬ್‌ಸಮ್, ಇವರು ಗೋಕಾಕ್‌ನಲ್ಲಿ ದಿನಾಂಕ 20.05.2007 ರಂದು ವಿವಾಹವಾಗಿದ್ದಾರೆ ಮತ್ತು ಅವರ ವಿವಾಹದಿಂದ, 1ನೇ ಪ್ರತಿವಾದಿ ಕುಮಾರಿ ಶಿಫಾ ಎರಡು ವರ್ಷಗಳ ತರುವಾಯ ದಿನಾಂಕ 9.10.2009ರಂದು ಜನಿಸಿದ್ದಾಳೆಂಬುದು ಪ್ರತಿವಾದಿಗಳ ನಿರ್ದಿಷ್ಟ ವಾದವಾಗಿದೆ. ವಿವಾಹವಾಗಿ ಒಂದು ವರ್ಷ ಗತಿಸಿಹೋದ ತರುವಾಯ, ತಾಯಿ ಮತ್ತು ವಾದಿಯು, ಯಾವುದೇ ವ್ಯಾಜ್ಯ ಅಥವಾ ಕಾರಣವಿಲ್ಲದೇ ಸೊಸೆ/2ನೇ ಪ್ರತಿವಾದಿಯನ್ನು ಹೊಡೆದು ತೊಂದರೆ ನೀಡಿದ್ದಾರೆ. ಆದ್ದರಿಂದ ವಾದಿಯು ತನಗೆ ಮತ್ತು ತನ್ನ ಪತ್ನಿಗೆ ಬುಕಾರಿ ಬಿಲ್ಡಿಂಗ್, ವೀರಭದ್ರ ನಗರ ಬೆಳಗಾಂನಲ್ಲಿ ಪ್ರತ್ಯೇಕ ವಸತಿ ವ್ಯವಸ್ಥೆ ಮಾಡಿಕೊಂಡಿದ್ದಾನೆ ಮತ್ತು ಅವನು ಪತ್ನಿಯೊಂದಿಗೆ ಅಲ್ಲಿ ವಾಸಿಸಲಾರಂಭಿಸಿದ್ದಾನೆ. ವಾದಿಯು, ಗೋಕಾಕ್ ಫಾಲ್ಸ್ ಮಿಲ್‌ನಲ್ಲಿ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಬೆಳಗಾಂ ನಿಂದ ಗೋಕಾಕ್‌ಗೆ ಪ್ರಯಾಣಿಸುತ್ತಿರುತ್ತಾನೆ. ತರುವಾಯ, ಗೋಕಾಕ್ ಪಾಲ್ಸ್‌ನಲ್ಲಿ ಮ್ಯಾನೇಜರ್ ಆಗಿ ವಾದಿಯು ಕೆಲಸವನ್ನು ನಿರ್ಲಕ್ಷ್ಯ ಮಾಡಿದ್ದಾನೆ ಮತ್ತು ಅವನು ತನ್ನ ಪತ್ನಿಯ

ಪೋಷಕರಿಂದ 50,000/– ರೂಪಾಯಿಗಳಿಗೆ ಬೇಡಿಕೆ ಇಟ್ಟಿದ್ದಾನೆ. 2ನೇ ಪ್ರತಿವಾದಿಯು, ಆಕೆಯ ಪೋಷಕರ ಬಡತನದ ಕಾರಣದಿಂದ ವಾದಿಯು ಮಾಡಿದ ಕಾನೂನುಬಾಹಿರ ಬೇಡಿಕೆಯನ್ನು ಪೂರೈಸಿರುವುದಿಲ್ಲ. ಆದ್ದರಿಂದ, ವಾದಿಯು ಕೋಪಗೊಂಡಿದ್ದಾನೆ ಮತ್ತು ಯಾವುದೇ ವ್ಯಾಜ್ಯ ಮತ್ತು ಕಾರಣವಿಲ್ಲದೇ ಅವನು ಪತ್ನಿಗೆ ತೊಂದರೆ ಮಾಡಿದ್ದಾನೆ ಎಂದೂ ಸಹ ಅವರು ವಾದಿಸಿದ್ದಾರೆ.

6. 2ನೇ ಪ್ರತಿವಾದಿಯ ಪೋಷಕರು ಗೋಕಾಕ್ ಜಮಾತ್‌ನ ಹಿರಿಯ ವ್ಯಕ್ತಿಗಳಾಗಿದ್ದು, ವಾದಿಯು, ವೈವಾಹಿಕ ಜೀವನವನ್ನು ಸಂತೋಷವಾಗಿ ಮುನ್ನಡೆಸಲು ಮತ್ತು ಉತ್ತಮ ಪತಿಯಾಗಿ ತನ್ನ ವೈವಾಹಿಕ ಹೊಣೆಗಳನ್ನು ನೆರವೇರಿಸಲು ಮನವಿ ಮಾಡಿದ್ದಾರೆ ಎಂಬುದು ಪ್ರತಿವಾದಿಗಳ ಮುಂದುವರೆದ ವಾದವಾಗಿದೆ. ಇದಲ್ಲದೇ, ವಾದಿಯು ಆ ಬಗ್ಗೆ ಯಾವುದೇ ಆಸಕ್ತಿ ತೋರಿಸಿರುವುದಿಲ್ಲ. ಆದ್ದರಿಂದ, 2ನೇ ಪ್ರತಿವಾದಿಯು, ಕೌಟುಂಬಿಕ ನ್ಯಾಯಾಲಯ, ಬೆಳಗಾಂ ಮುಂದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಅಡಿಯಲ್ಲಿ ಕ್ರಿಮಿನಲ್ ಅರ್ಜಿ ಸಂ.330/2010ನ್ನು ದಾಖಲಿಸುವುದರ ಮೂಲಕ ಈ ನ್ಯಾಯಾಲಯದ ಮೊರೆ ಹೋಗುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ.

7. ಪ್ರತಿವಾದಿಗಳು, ವಿವಿಧ ದಾಖಲೆಗಳನ್ನು ಹಾಜರುಪಡಿಸಿದ್ದು, ವಾದಿ ಮತ್ತು ಅವನ ಪತ್ನಿ 2ನೇ ಪ್ರತಿವಾದಿ ನಡುವಿನ ವಿವಾಹದಿಂದ, 1ನೇ ಪ್ರತಿವಾದಿ ಜನಿಸಿದ್ದಾಳೆಂಬುದನ್ನು ಬಹಿರಂಗಪಡಿಸಿದ್ದಾರೆ. ದಾಖಲೆಯಲ್ಲಿನ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ತರುವಾಯ, ಕೌಟುಂಬಿಕ ನ್ಯಾಯಾಲಯವು ಪತ್ನಿ ಮತ್ತು ಮಗಳು, ಇಬ್ಬರಿಗೂ ಪ್ರತಿ ತಿಂಗಳು 750/– ರೂಪಾಯಿಗಳ ಮೊತ್ತವನ್ನು ಜೀವನಾಂಶವಾಗಿ ಐತೀರ್ಪು ನೀಡಿದ್ದಾರೆ. ಕೌಟುಂಬಿಕ ನ್ಯಾಯಾಲಯದ ಸದರಿ ಆದೇಶದಿಂದ ಬಾಧಿತನಾದ, ಪತಿಯು, ಆರ್‌ಪಿಎಫ್‌ಸಿ 308/2012ರಲ್ಲಿ ಈ ನ್ಯಾಯಾಲಯದ ಮುಂದೆ ಪರಿಷ್ಕರಣಾ ಅರ್ಜಿಯನ್ನು ದಾಖಲು ಮಾಡಿದ್ದಾನೆ ಮತ್ತು ಉಭಯ ಪಕ್ಷಕಾರರ ಸುನಾವಣೆಯ ತರುವಾಯ ಈ ನ್ಯಾಯಾಲಯವು ಆರ್‌ಪಿಎಫ್‌ಸಿಯನ್ನು ವಜಾಗೊಳಿಸಿದೆ ಮತ್ತು ಪ್ರತಿವಾದಿಗಳಿಗೆ ಜೀವನಾಂಶ ನೀಡುವಲ್ಲಿ ಕೌಟುಂಬಿಕ ನ್ಯಾಯಾಲಯ ಮಾಡಿದ ಆದೇಶವನ್ನು ಸ್ಥಿರೀಕರಿಸಿದೆ.

ಆದ್ದರಿಂದ, ಅವನು ಘೋಷಣೆಗಾಗಿ ದಾವೆಯನ್ನು ದಾಖಲು ಮಾಡಿದ್ದಾನೆ. ದಾವೆಯ ಇತ್ಯರ್ಥದ ಅವಧಿಯಲ್ಲಿ, ವಾದಿ ಮತ್ತು 2ನೇ ಪ್ರತಿವಾದಿಯನ್ನು ಡಿಎನ್ಎ ಪರೀಕ್ಷೆಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣವನ್ನು ಓದಿಕೊಂಡು ಕ್ರಮಾದೇಶ 26 ನಿಯಮ 10(ಎ) ಮತ್ತು ಸಾಕ್ಷ್ಯ ಅಧಿನಿಯಮ 45ನೇ ಪ್ರಕರಣದ ಅಡಿಯಲ್ಲಿ ಅವನು ಅರ್ಜಿಯನ್ನು ದಾಖಲು ಮಾಡಿದ್ದಾನೆ. ಲಿಖಿತ ಹೇಳಿಕೆಯಲ್ಲಿ ಮಾಡಿದ ದೃಢೋಕ್ತಿಗಳನ್ನು ಪುನರುಚ್ಚರಿಸಿ, ಆಕ್ಷೇಪಣೆಗಳನ್ನು ದಾಖಲು ಮಾಡುವ ಮೂಲಕ ಸದರಿ ಅರ್ಜಿಯನ್ನು ಪ್ರತಿವಾದಿಗಳು ವಿರೋದಿಸಿದ್ದಾರೆ ಮತ್ತು ವಾದಿಯು ದಾಖಲು ಮಾಡಿದ ಪ್ರಸ್ತುತ ಅರ್ಜಿಯನ್ನು ಪ್ರತಿವಾದಿಗಳಿಗೆ ಕಿರುಕುಳ ನೀಡುವ ಉದ್ದೇಶದೊಂದಿಗೆ ದಾಖಲು ಮಾಡಿರುವುದರಿಂದ ಅದು ದುರ್ಭಾವನೆಯೊಂದಿಗೆ ಅಕ್ರಮವಾಗಿದ್ದು, ತಿರಸ್ಕರಿಸುವುದಕ್ಕೆ ಅರ್ಹವಾಗಿರುತ್ತದೆಯೆಂದು ವಾದಿಸಲಾಗಿದೆ ಮತ್ತು ವಾದಿಯು, ಕ್ರಿಮಿನಲ್ ಸಂಕೀರ್ಣ ಸಂ.330/2010ರಲ್ಲಿಯೇ, 1ನೇ ಪ್ರತಿವಾದಿಯು ತನ್ನ ಮಗಳಲ್ಲವೆಂದು ಹೇಳಿದ ಅದೇ ವಾದವನ್ನು ಎತ್ತಲಾಗಿದ್ದು, ಮತ್ತು ದಾಖಲೆಯ ಮೇಲೆ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ, ಸದರಿ ವಾದವನ್ನು ಕೌಟುಂಬಿಕ ನ್ಯಾಯಾಲಯವು ರದ್ದುಪಡಿಸಿದೆ ಮತ್ತು ಜೀವನಾಂಶ ನೀಡಲಾಗಿದೆಯೆಂದು ಸಹ ವಾದಿಸಲಾಗಿದೆ. ಅದನ್ನು ಪರಿಷ್ಕರಣಾ ಅರ್ಜಿ ಸಂ.308/2012ರಲ್ಲಿ ಉಚ್ಚ ನ್ಯಾಯಾಲಯದಿಂದ ಸ್ಥಿರೀಕರಿಸಲಾಗಿದೆ. ವಾದಿಯು, ಡಿಎನ್ಎ ಪರೀಕ್ಷೆ ನಡೆಸುವುದಕ್ಕಾಗಿ ಕೋರ್ಟು ಕಮೀಷನರ್‌ರನ್ನು ನೇಮಿಸಲು ಯಾವುದೇ ಕಾನೂನು ಅಥವಾ ತರ್ಕ ಕಾರಣಗಳನ್ನು ನೀಡಿಲ್ಲವೆಂಬುದು ಸಹ ಆಕೆಯ ವಾದವಾಗಿದೆ. ಘೋಷಣೆಗಾಗಿ ದಾವೆಯನ್ನು ದಾಖಲು ಮಾಡಿರುವುದರಿಂದ ಅವನು, ಸಕಾರಾತ್ಮಕ ಸಾಕ್ಷ್ಯ ಮಂಡಿಸುವ ಮೂಲಕ ತನ್ನ ವಾದವನ್ನು ರುಜುವಾತುಪಡಿಸಬೇಕಾಗಿರುತ್ತದೆ ಮತ್ತು ಅದು, ಸಾಕ್ಷ್ಯ ಸಂಗ್ರಹಿಸಲಾಗುವಂತೆ ಕೋರ್ಟು ಕಮೀಷನರ್ ನೇಮಕಾತಿ ಕೋರಿರುವುದು ಕಾನೂನಿನಲ್ಲಿ ಅನುಮತೀಯವಲ್ಲ. 1ನೇ ಪ್ರತಿವಾದಿಯು, ವಾದಿ ಮತ್ತು 2ನೇ ಪ್ರತಿವಾದಿಯ ಮಗಳಾಗಿದ್ದಾಳೆಂಬುದನ್ನು ಪ್ರತಿವಾದಿಗಳು ಸ್ಪಷ್ಟವಾಗಿ ಸೂಚಿಸುವ ಮೂಲಕ ಸರ್ಕಾರಿ ದಾಖಲೆಯನ್ನು ಹಾಜರುಪಡಿಸಿದ್ದಾರೆ. ಆದ್ದರಿಂದ, ಆಕೆಯು ಅಧಿವಿಚಾರಣಾ ನ್ಯಾಯಾಲಯದ ಮುಂದೆ ದಾಖಲು ಮಾಡಿದ ಅರ್ಜಿಯನ್ನು ವಜಾಗೊಳಿಸುವುದಕ್ಕಾಗಿ ಕೋರಿದ್ದಾಳೆ.

8. ಅರ್ಜಿ ಮತ್ತು ಆಕ್ಷೇಪಣೆಗಳನ್ನು ಪರಿಗಣಿಸಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯವು ತನ್ನ ಪ್ರಶ್ನಿತ ಆದೇಶ ದಿನಾಂಕ 21.11.2015ರ ಮೂಲಕ ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಪೂರ್ವಭಾವನೆ ಇಲ್ಲದಂತೆ ಮಾಡುವ ಸಲುವಾಗಿ ಅವರು ಭೇಟಿಯಾಗಿಲ್ಲವೆಂದು ರುಜುವಾತು ಮಾಡಲು ಪಕ್ಷಕಾರನು ಪಿತೃತ್ವವನ್ನು ವಿವಾದಿತಗೊಳಿಸಿದ್ದಾನೆಂದು ಅಭಿಪ್ರಾಯಪಟ್ಟು ಸದರಿ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಸದರಿ ಆದೇಶದ ವಿರುದ್ಧ, ಪ್ರಸ್ತುತ ಈ ರಿಟ್ ಅರ್ಜಿಯನ್ನು ದಾಖಲು ಮಾಡಲಾಗಿದೆ.

9. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಯ ಅಹವಾಲನ್ನು ನಾನು ಆಲಿಸಿದ್ದೇನೆ.

10. ಡಿಎನ್‌ಎ ಪರೀಕ್ಷೆ ನಡೆಸುವುದಕ್ಕೆ ಕೋರ್ಟು ಕಮೀಷನರ್ ನೇಮಕಾತಿ ಅರ್ಜಿಯನ್ನು ತಿರಸ್ಕರಿಸಿ ಅಧಿವಿಚಾರಣಾ ನ್ಯಾಯಾಲಯ ಮಾಡಿದ ಪ್ರಶ್ನಿತ ಆದೇಶವು ಯಾವುದೇ ಆಧಾರವಿಲ್ಲದ್ದಾಗಿದೆಯೆಂದು ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ಪ್ರೇಮಲತಾ ಜಿ. ನಾಯಕ್‌ರವರು ಭಾವಾವೇಶವಾಗಿ ವಾದಿಸಿದ್ದಾರೆ. 2007 ರಿಂದ 2009ರವರೆಗೆ ಅರ್ಜಿದಾರ ಮತ್ತು 2ನೇ ಪ್ರತ್ಯರ್ಜಿದಾರರು ಪರಸ್ಪರ ಸೇರದೆ ಇರುವುದರಿಂದ ಅವರ ವಿವಾಹದಿಂದ ಮಗು ಜನಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂಬ ಸಂಗತಿಯನ್ನು ವಿವೇಚಿಸಲು ಕೌಟುಂಬಿಕ ನ್ಯಾಯಾಲಯ ವಿಫಲವಾಗಿದೆ ಮತ್ತು 1ನೇ ಪ್ರತಿವಾದಿಯು ಅರ್ಜಿದಾರನ ಮಗಳೇ ಅಲ್ಲ ಮತ್ತು ಕೋರ್ಟು ಕಮೀಷನರ ನೇಮಕಾತಿ ಮೂಲಕ ನ್ಯಾಯಸ್ಥಾನಕರಿಂದ ಡಿಎನ್‌ಎ ಪರೀಕ್ಷೆ ನಡೆಸುವ ಮೂಲಕ ಅದನ್ನು ರುಜುವಾತು ಪಡಿಸಬೇಕಾಗುತ್ತದೆಯೆಂದು, ಅದಕ್ಕೆ ಈ ನ್ಯಾಯಾಲಯದ ಹಸ್ತಕ್ಷೇಪ ಅಗತ್ಯವಿದೆಯೆಂದು ಆಕೆಯು ನಿರ್ದಿಷ್ಟವಾಗಿ ವಾದಿಸಿದ್ದಾರೆ, ವಾದಿಯು ದಾಖಲು ಮಾಡಿದ ಆ ದಾವೆಯಲ್ಲಿ ಮಗುವಿನ ಪಿತೃತ್ವದ ಘೋಷಣೆಗೆ ಕೋರಲಾಗಿದೆಯೆಂದು ಆಕೆಯು ಮುಂದುವರೆದು ವಾದಿಸಿದ್ದಾಳೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯ ಈ ಪ್ರಕರಣದ ಸತ್ಯಾಂಶವನ್ನು ತಿಳಿದುಕೊಳ್ಳಲು ಡಿಎನ್‌ಎ ಪರೀಕ್ಷೆ ನಡೆಸುವುದಕ್ಕಾಗಿ ದಾಖಲು

ಮಾಡಿದ ಅರ್ಜಿಯನ್ನು ಅಂಗೀಕರಿಸಲೇಬೇಕಾಗಿದೆ. ಆದ್ದರಿಂದ, ಆಕೆಯು, ಕೌಟುಂಬಿಕ ನ್ಯಾಯಾಲಯ ಮಾಡಿದ ಪ್ರಶ್ನಿತ ಆದೇಶವನ್ನು ರದ್ದುಗೊಳಿಸುವಂತೆ ಕೋರಿದ್ದಾರೆ.

11. ಆಕೆಯ ವಾದಗಳಿಗೆ ಪೂರಕವಾಗಿ, ಮಾನ್ಯ ನ್ಯಾಯವಾದಿಯು, ವರದಿ ಮಾಡಿದ ***ನಂದಲಾಲ್ ವಸುಡಿಯೊ ಬದ್ವೈಕ್ –ವಿರುದ್ಧ– ಲತಾ ನಂದಲಾಲ್ ಬದ್ವೈಕ್ ಹಾಗೂ ಇನ್ನೊಬ್ಬರು*** [1] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಮೇಲೆ ಅವಲಂಬಿಸಿದ್ದಾರೆ.

12. ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಮಂಡಿಸಿದ ವಾದಗಳನ್ನು ನಾನು ಆಲೋಚನಾಶೀಲವಾಗಿ ಪರಿಗಣಿಸಿದ್ದೇನೆ ಮತ್ತು ದಾಖಲೆ ಮೇಲಿನ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿದೆ.

13. ವಾದಿ ಮತ್ತು 2ನೇ ಪ್ರತಿವಾದಿಯ ನಡುವೆ ವಿವಾಹವನ್ನು ದಿನಾಂಕ 20.05.2007 ರಂದು ನಡೆಸಲಾಗಿದೆಯೆಂಬುದು ವಿವಾದಿತ ಸಂಗತಿಯಾಗಿರುವುದಿಲ್ಲ ಮತ್ತು 1ನೇ ಪ್ರತಿವಾದಿಯು, ದಿನಾಂಕ 09.10.2009 ರಂದು ಜನಿಸಿದ್ದಾರೆಂಬುದು ಸಹ ನಿರ್ವಿವಾದವಾಗಿದೆ. ಪ್ರತಿವಾದಿಗಳು ತಾವು ವಾದಿಯ ಪತ್ನಿ ಮತ್ತು ಮಗಳೆಂದು ತಿಳಿಸಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಅಡಿಯಲ್ಲಿ ಕೌಟುಂಬಿಕ ನ್ಯಾಯಾಲಯದ ಮುಂದೆ ಕ್ರಿಮಿನಲ್ ಸಂಕೀರ್ಣ ಸಂ.330/2010ನ್ನು ದಾಖಲಿಸಿದ್ದಾರೆ ಮತ್ತು ಜೀವನಾಂಶಕ್ಕಾಗಿ ಕೋರಿದ್ದಾರೆಂಬುದು ಸಹ ವಿವಾದವಾಗುವುದಿಲ್ಲ. ಪ್ರತಿವಾದಿಸಿದ ತರುವಾಯ, ದಿನಾಂಕ 05.06.2012 ರಂದು ಕೌಟುಂಬಿಕ ನ್ಯಾಯಾಲಯ 750/– ರೂಪಾಯಿಗಳ ಜೀವನಾಂಶ ನೀಡಿದೆ. ಅದನ್ನು ಆರ್‌ಪಿಎಫ್‌ಸಿ ಸಂ.308/ 2012ರಲ್ಲಿ ಈ ನ್ಯಾಯಾಲಯದಿಂದ ಸ್ಥಿರೀಕರಿಸಿದ್ದು, ಪ್ರತಿವಾದಿಗಳು, ವಾದಿಯ ಪತ್ನಿ ಮತ್ತು ಮಗಳೆಂದು ಮೇಲ್ನೋಟಕ್ಕೆ ಅಭಿಪ್ರಾಯಪಟ್ಟಿದೆ. ಕೌಟುಂಬಿಕ ನ್ಯಾಯಾಲಯದಿಂದ ಸದರಿ ಆದೇಶ ಮಾಡಿದ್ದು, ಈ ನ್ಯಾಯಾಲಯದಿಂದ ಸ್ಥಿರಪಡಿಸಿದ್ದು, ಅಂತಿಮ ಹಂತದಲ್ಲಿದೆ. ಆರ್‌ಪಿಎಫ್‌ಸಿ ಸಂ.308/2012ರ ವಿಲೇಯ ತರುವಾಯ, ಅರ್ಜಿದಾರನು, 1ನೇ ಪ್ರತಿವಾದಿಯು, ತನ್ನ ಮಗಳು ಅಲ್ಲವೆಂದು

1. 2014 ಎಐಆರ್ ಎಸ್‌ಸಿಡಬ್ಲ್ಯೂ 506

ಘೋಷಿಸುವುದಕ್ಕಾಗಿ ದಿನಾಂಕ 20.07.2012 ರಂದು ದಾವೆಯನ್ನು ದಾಖಲು ಮಾಡಿದ್ದಾನೆಂಬುದು ಸಹ ವಿವಾದವಾಗುವುದಿಲ್ಲ. ಎರಡೂ ಕಡೆಯ ಸಾಕ್ಷ್ಯವನ್ನು ಪೂರ್ಣಗೊಳಿಸಿದ ತರುವಾಯ, ಆ ವಿಷಯವನ್ನು ವಾದಗಳಿಗಾಗಿ ಕಳುಹಿಸಲಾಗಿದೆ. ಆ ಹಂತದಲ್ಲಿ, 1ನೇ ಪ್ರತಿವಾದಿಯ ಪಿತೃತ್ವವನ್ನು ನಿರ್ಣಯಿಸಲು ವಾದಿ ಮತ್ತು 2ನೇ ಪ್ರತಿವಾದಿಯ ಡಿಎನ್‌ಎ ಪರೀಕ್ಷೆ ನಡೆಸಲು ಕೋರ್ಟು ಕಮೀಷನರ್ ನೇಮಕಾತಿಗೆ ದಿನಾಂಕ 06.10.2015 ರಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 10(ಎ) ಅಡಿಯಲ್ಲಿ ಪ್ರಸ್ತುತ ಅರ್ಜಿಯನ್ನು ದಾಖಲು ಮಾಡಲಾಗಿದೆ. ಪ್ರಮುಖ ದಾವೆಯಲ್ಲಿರುವ ಮತ್ತು ಮಧ್ಯಕಾಲೀನ ಅರ್ಜಿಯಲ್ಲಿರುವ ಕೋರಿಕೆಯು ಒಂದೇ ಆಗಿದೆ.

14. ವಾದಪತ್ರದಲ್ಲಿ, 2ನೇ ಪ್ರತಿವಾದಿಯು, ಇನ್ನೊಬ್ಬ ವ್ಯಕ್ತಿಯೊಂದಿಗೆ ಅಕ್ರಮ ಸಂಬಂಧವನ್ನಿಟ್ಟುಕೊಂಡಿದ್ದಾಳೆ ಮತ್ತು 1ನೇ ಪ್ರತಿವಾದಿಯು, ಆ ಕಾನೂನುಬಾಹಿರ ಸಂಬಂಧದಿಂದ ಜನಿಸಿದ್ದಾಳೆಂದು 9ನೇ ಪ್ಯಾರಾದಲ್ಲಿ ವಾದಿಯು ದೃಢ ಹೇಳಿಕೆಗಳನ್ನು ಮಾಡಿದ್ದಾನೆ. ಪತ್ನಿಯು ಮಗುವಿನ ಸಂಬಂಧವನ್ನು ಕಾನೂನುಸಮ್ಮತಗೊಳಿಸಲಷ್ಟೇ ತನಗಾಗಿ ಮತ್ತು ತನ್ನ ಮಗುವಿಗಾಗಿ ಜೀವನಾಂಶ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಆದರೆ, ಸದರಿ ಆಪಾದನೆಗಳನ್ನು, ಲಿಖಿತ ಹೇಳಿಕೆಯ ಪ್ಯಾರಾ 12ರಲ್ಲಿ ಪ್ರತಿವಾದಿಯು ನಿರ್ದಿಷ್ಟವಾಗಿ ಅಲ್ಲಗಳೆದಿದ್ದಾರೆ ಮತ್ತು ಮಗುವು, 2ನೇ ಪ್ರತಿವಾದಿ ಮತ್ತು ವಾದಿಯ ನಡುವಿನ ವಿವಾಹದಿಂದ ಜನಿಸಿದೆಯೆಂದು ವಾದಿಸಿದ್ದಾರೆ. ವಾದಿಯು ವಾದಪತ್ರದ ಪ್ಯಾರಾ ಸಂ.9ರಲ್ಲಿ, ಅವನು, ಜೂನ್ 2007 ರಿಂದ ದಾವೆಯನ್ನು ದಾಖಲು ಮಾಡಿದ ದಿನಾಂಕದವರೆಗೆ ಅವನು ತನ್ನ ಪತ್ನಿಯೊಂದಿಗೆ ಸಂಪರ್ಕಿಸಿರುವುದಿಲ್ಲ. ಆದ್ದರಿಂದ, ವಾದಿ ಮತ್ತು ಅವನ ಪತ್ನಿಯ ವಿವಾಹದಿಂದ ಮಗು ಜನಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲವೆಂದು ಆಪಾದಿಸಿದ್ದಾರೆ. ಸದರಿ ಆಪಾದನೆಯನ್ನು, ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಗಳು ಅಲ್ಲಗಳೆದಿದ್ದಾರೆ ಮತ್ತು 1ನೇ ಪ್ರತಿವಾದಿಯು, ವಾದಿ ಮತ್ತು 2ನೇ ಪ್ರತಿವಾದಿಯ ವಿವಾಹದಿಂದ ಜನಿಸಿದ್ದಾಳೆಂದು ನಿರ್ದಿಷ್ಟವಾಗಿ ವಾದಿಸಿದ್ದಾರೆ. ಮಗುವು, ವಾದಿ ಮತ್ತು 2ನೇ ಪ್ರತಿವಾದಿಯ ನಡುವೆ ವಿಧಿಸಮ್ಮತ ವಿವಾಹದ ಜೀವನ ನಿರ್ವಹಣಾ ಅವಧಿಯಲ್ಲಿ ಜನಿಸಿದೆಯೆಂಬುದು ನಿರ್ವಿವಾದವಾಗಿದೆ.

15. ಮೇಲೆ ಹೇಳಲಾದ ಅಂಗೀಕರಿಸಿದ ಸಂಗತಿಗಳ ದೃಷ್ಟಿಯಿಂದ, ಪರಿಗಣನೆಗಾಗಿ ಉದ್ಭವಿಸಿದ ಏಕೈಕ ಪ್ರಶ್ನೆಯು:

> *"ವಾದಿ ಮತ್ತು 2ನೇ ಪ್ರತಿವಾದಿಯ ಡಿಎನ್ಎ ಪರೀಕ್ಷೆ ನಡೆಸುವುದಕ್ಕೆ ಕೋರ್ಟು ಕಮೀಷನರ್ ನೇಮಕಾತಿಗಾಗಿ ಕೋರಿರುವ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಲಾದ ಕ್ರಮಾದೇಶ 26 ನಿಯಮ 10(ಎ) ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸಮರ್ಥಿತವಾಗಿದೆಯೇ?"*

16. 1ನೇ ಪ್ರತಿವಾದಿಯು, ತನ್ನ ಮಗಳು ಅಲ್ಲ ಮತ್ತು ಅಂಗೀಕರಿಸಲಾದಂತೆ ದಿನಾಂಕ 26.07.2012 ರಂದು ದಾವೆಯನ್ನು ಹೂಡಲಾಗಿದೆ. ಉಭಯ ಪಕ್ಷಕಾರರು, ತಮ್ಮ ಸಾಕ್ಷ್ಯವನ್ನು ಮಂಡಿಸಿದ್ದಾರೆ ಮತ್ತು ತಮ್ಮ ಸಂಬಂಧಪಟ್ಟ ಪ್ರಕರಣವನ್ನು ಪ್ರತಿವಾದಿಸಲು ಸಂಬಂಧಪಟ್ಟ ದಸ್ತಾವೇಜುಗಳನ್ನು ಹಾಜರುಪಡಿಸಲಾಗಿದೆ ಮತ್ತು ಆ ವಿಷಯವನ್ನು ವಾದಗಳಿಗಾಗಿ ಹಾಕಲಾಗಿದೆ. ಆ ಹಂತದಲ್ಲಿ, ಪ್ರಸ್ತುತ ಅರ್ಜಿಯನ್ನು ದಾಖಲು ಮಾಡಲಾಗಿದೆ. ಪಕ್ಷಕಾರರು, ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿದಾಗ ಮತ್ತು ವಾದಪತ್ರದಲ್ಲಿ ಹಾಗೂ ಲಿಖಿತ ಹೇಳಿಕೆಯಲ್ಲಿ ಮಾಡಲಾದ ತಮ್ಮ ಸಂಬಂಧಪಟ್ಟ ದೃಢ ಹೇಳಿಕೆಗಳನ್ನು ಪ್ರತಿವಾದಿಸಲು ಸಾಧ್ಯವಾಗುವಂತೆ ಸಾಕ್ಷ್ಯ ಮಂಡಿಸಿದಾಗ, ದಾವೆಯು ಪಕ್ಷಕಾರರ ನಡುವಿನ ವಿವಾದವನ್ನು ದಾಖಲೆ ಮೇಲಿನ ಉಭಯ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ ಅಧಿವಿಚಾರಣಾ ನ್ಯಾಯಾಲಯವು ನ್ಯಾಯನಿರ್ಣಯ ಮಾಡಬಹುದಾಗಿದೆ.

17. ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರನು 1ನೇ ಪ್ರತಿವಾದಿ ತನ್ನ ಮಗಳು ಅಲ್ಲವೆಂದು ದೃಢ ಹೇಳಿಕೆಗಳನ್ನು ಮಾಡಿದ್ದರೂ, ಪತ್ನಿಯ ವಿರುದ್ಧ ನಿರ್ದಿಷ್ಟ ಆಪಾದನೆಗಳನ್ನು ಮಾಡಿಲ್ಲವೆಂಬ 2ನೇ ಪ್ರತಿವಾದಿಯು, ಬೇರೆ ಪುರುಷನೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿರುವ ಬಗ್ಗೆ ನೇರವಾದ ಆಪಾದನೆಯನ್ನು ಹೊರತುಪಡಿಸಿ ಅವನು ತನ್ನ ವಾದವನ್ನು ರುಜುವಾತುಪಡಿಸಲು ನ್ಯಾಯಾಲಯದ ಮುಂದೆ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿರುವುದಿಲ್ಲ ಮತ್ತು ಸಾಕ್ಷ್ಯ ನೀಡಿರುವುದಿಲ್ಲ.

ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಉದ್ಧವಿಸಿದ ಪೂರ್ವಭಾವನೆಯನ್ನು ಇಲ್ಲದಂತೆ ಮಾಡಲು, ಅವನು, ತನ್ನ ಪತ್ನಿಯೊಂದಿಗೆ ಸೇರಿರುವುದಿಲ್ಲವೆಂಬುದನ್ನು ರುಜುವಾತುಪಡಿಸಲು ವಾದಿಯು ವಿಫಲನಾಗಿದ್ದಾನೆಂಬುದನ್ನು ಒಪ್ಪಿಕೊಂಡಿದ್ದು, ಅದು ಕೆಳಗಿನಂತಿದೆ:

> *"112. ವೈವಾಹಿಕ ಸಂಬಂಧದ ಅವಧಿಯಲ್ಲಿನ ಜನನವು ವಿಧಿಸಮ್ಮತ ಜನನ ವೆಂಬುದಕ್ಕೆ ನಿರ್ಣಾಯಕ ರುಜುವಾತು:– ತನ್ನ ತಾಯಿಯ ಮತ್ತು ಯಾವನೇ ಪುರುಷನ ನಡುವೆ ವಿಧಿ ಮಾನ್ಯ ವೈವಾಹಿಕ ಸಂಬಂಧವು ಮುಂದುವರಿಯುತ್ತಿರುವಾಗ ಅಥವಾ ಅಂಥ ವಿವಾಹವು ವಿಘಟಿತವಾದ ತರುವಾಯದ ಇನ್ನೂರು ಎಂಭತ್ತು ದಿನಗಳೊಳಗೆ, ತಾಯಿಯು ಮತ್ತೆ ವಿವಾಹವಾಗದೆ ಇರುವಾಗ ಯಾವನೇ ವ್ಯಕ್ತಿಯು ಹುಟ್ಟಿದ ಸಂಗತಿಯು, ಗರ್ಭದಾನವಾಗಬಹುದಾಗಿದ್ದ ಯಾವುದೇ ಸಮಯದಲ್ಲಿ ವಿವಾಹದ ಪಕ್ಷಕಾರರು ಪರಸ್ಪರ ಸಂಪರ್ಕ ಹೊಂದಿಲ್ಲವೆಂದು ತೋರಿಸಿಕೊಟ್ಟ ಹೊರತು, ಅವನು ಅಂಥ ಪುರುಷನ ವಿಧಿಸಮ್ಮತವಾದ ಮಗನಾಗಿದ್ದನೆಂಬುದಕ್ಕೆ ನಿರ್ಣಾಯಕ ರುಜುವಾತಾಗಿರತಕ್ಕದ್ದು."*

18. ಸದರಿ ಉಪಬಂಧವನ್ನು ಸ್ಪಷ್ಟವಾಗಿ ಓದುವುದರಿಂದ, ಯಾರೇ ವ್ಯಕ್ತಿಯು, ಅವನ/ಆಕೆಯ ತಾಯಿ ಮತ್ತು ಯಾರೇ ಪುರುಷನ ನಡುವೆ ವಿಧಿ ಮಾನ್ಯ ವೈವಾಹಿಕ ಸಂಬಂಧವು ಮುಂದುವರಿಯುತ್ತಿರುವ ಅವಧಿಯಲ್ಲಿ ಅಥವಾ ವಿಘಟಿತವಾದ ತರುವಾಯದ ಇನ್ನೂರು ಎಂಭತ್ತು ದಿನಗಳೊಳಗೆ, ತಾಯಿಯು ವಿವಾಹವಾಗದೇ ಇರುವಾಗ, ಜನಿಸಿದಲ್ಲಿ, ವಿವಾಹದ ಪಕ್ಷಕಾರರು, ಯಾವುದೇ ಸಮಯದಲ್ಲಿ ಪರಸ್ಪರ ಸಂಪರ್ಕ ಹೊಂದಿರಲಿಲ್ಲವೆಂದು ಅವನು ತೋರಿಸಿಕೊಟ್ಟ ಹೊರತು, ಆ ಮಗುವು ಆ ವ್ಯಕ್ತಿಯ ವಿಧಿಸಮ್ಮತ ಮಗುವೆಂಬುದು ನಿರ್ಣಾಯಕ ರುಜುವಾತು ಆಗಿರತಕ್ಕದ್ದು ಎಂದು ಸ್ಪಷ್ಟವಾಗುತ್ತದೆ.

19. ಡೀಆಕ್ಸಿರೈಬೊನ್ಯೂಕ್ಲಿಯಿಕ್ ಆಸಿಡ್ (ಡಿಎನ್ಎ) ಪರೀಕ್ಷೆಯನ್ನು ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಊಹಿಸಲಾದ ನಿರ್ಣಾಯಕ ಪೂರ್ವಭಾವನೆಯನ್ನು ಖಂಡಿಸಲಾಯಿತು. ಪಕ್ಷಕಾರರು, ಸಂಪರ್ಕವಿರದ

ರುಜುವಾತಿನ ಮೂಲಕ ಮಾತ್ರ ಅಂಥ ನಿರ್ಣಾಯಕ ಪೂರ್ವಭಾವನೆಯ ಕಾಠಿಣ್ಯದಿಂದ ತಪ್ಪಿಸಿಕೊಂಡಿದ್ದು, ಅದು ನಕಾರಾತ್ಮಕ ರುಜುವಾತಾಗಿದೆ. ನಿಜವಾಗಿ, ಭಾರತ ಸಾಕ್ಷ್ಯ ಅಧಿನಿಯಮದ 4ನೇ ಪ್ರಕರಣದೊಂದಿಗೆ ಓದಿಕೊಂಡ 112ನೇ ಪ್ರಕರಣವು, ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಮೂಲಕ ವಹಿಸಲಾದ ಮಗುವಿನ ವಿಧಿಸಮ್ಮತ ಮತ್ತು ಪಿತೃತ್ವದ ನಿರ್ಣಾಯಕ ರುಜುವಾತಾಗಿದೆಯೆಂದು ಹೇಳಲಾದ ಕಾನೂನು ಸಂಗತಿಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವನ್ನು ಸಂಪೂರ್ಣವಾಗಿ ಮುಚ್ಚಿಹಾಕುವ ಹಾಗೂ ಸಾಕ್ಷ್ಯವನ್ನು ಮಂಡಿಸುವುದರಿಂದ ಪಕ್ಷಕಾರನನ್ನು ನಿಷೇಧಿಸುವ ಪರಿಣಾಮವನ್ನು ಹೊಂದಿದೆ, ಪಕ್ಷಕಾರರು ವಿವಾಹವಾಗಿರುವಾಗ, ಪರಸ್ಪರ ಸಂಪರ್ಕದಲ್ಲಿದ್ದಾಗ ರಕ್ತ ಗುಂಪು ಪರೀಕ್ಷೆಗೆ ಆದೇಶಿಸುವಿಕೆಯು ಭಾರತ ಸಂವಿಧಾನದ 21ನೇ ಅನುಚ್ಛೇದದ ಅಡಿಯಲ್ಲಿ ಹಕ್ಕನ್ನು ಉಲ್ಲಂಘಿಸುತ್ತದೆ.

20. ಅಂಗೀಕರಿಸಲಾದಂತೆ, ವಾದಿ ಮತ್ತು 2ನೇ ಪ್ರತಿವಾದಿಯ ನಡುವೆ ವಿವಾಹವನ್ನು ದಿನಾಂಕ 20.05.2007 ರಂದು ನಡೆಸಲಾಗಿದೆ ಮತ್ತು ವಿಧಿಸಮ್ಮತ ವಿವಾಹವು, ಅಸ್ತಿತ್ವದಲ್ಲಿರುವಾಗ, 1ನೇ ಪ್ರತಿವಾದಿಯು, ದಿನಾಂಕ 09.10.2009 ರಂದು ಜನಿಸಿದ್ದಾರೆ. ಕೌಟುಂಬಿಕ ನ್ಯಾಯಾಲಯವು, ದಿನಾಂಕ 05.06.2012 ರಂದು ಪ್ರತಿವಾದಿಗಳಿಗೆ ಜೀವನಾಂಶ ನೀಡಿದೆ ಮತ್ತು ಪ್ರತಿವಾದಿಗಳು, ವಾದಿಯ ಪತ್ನಿ ಮತ್ತು ಮಗಳಾಗಿದ್ದಾರೆಂದು ಅಭಿಪ್ರಾಯಪಟ್ಟು ಅದನ್ನು ಆರ್‌ಪಿಎಫ್‌ಸಿ ಸಂ.308/ 2012 ರಲ್ಲಿ ಈ ನ್ಯಾಯಾಲಯದಿಂದ ಸ್ಥಿರೀಕರಿಸಲಾಗಿದೆ ಈ ತೀರ್ಮಾನವು ಅಂತಿಮವಾಗಿದೆ ಮತ್ತು ನಿರ್ಣಾಯಕವಾಗಿದೆ ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರನು, ಅವನ ಪತ್ನಿ ಎಂದರೆ 2ನೇ ಪ್ರತಿವಾದಿಯೊಂದಿಗೆ ಅವನು ಸಂಪರ್ಕಿಸಿರುವುದಿಲ್ಲ ಮತ್ತು 1ನೇ ಪ್ರತಿವಾದಿಯು, ಅವನು ಮತ್ತು 2ನೇ ಪ್ರತಿವಾದಿ ಪತ್ನಿ ನಡುವಿನ ವಿವಾಹದಿಂದ ಜನಿಸಿಲ್ಲವೆಂಬುದನ್ನು ರುಜುವಾತುಪಡಿಸುವ ಯಾವುದೇ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.

21. ಒಪ್ಪಿತ ಸಂಗತಿಗಳ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯವು, ಪಕ್ಷಕಾರರ ನಡುವಿನ ವಿಧಿಸಮ್ಮತ ವಿವಾಹವು, ಮಗುವಿನ ಜನನದ ದಿನಾಂಕದಂದು

ಅಸ್ತಿತ್ವದಲ್ಲಿತ್ತೆಂದು ಅಭಿಪ್ರಾಯಪಟ್ಟಿದೆ ಮತ್ತು ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತೆ ನಿರ್ಣಾಯಕ ಪೂರ್ವಭಾವನೆ ಮೇಲೆ ಅವಲಂಬಿಸಿದೆ ಮತ್ತು ಅವನು, ಆ ಸುಸಂಬದ್ಧ ಅವಧಿಯಲ್ಲಿ ವಿಧಿಸಮ್ಮತ ವಿವಾಹ ಅಸ್ತಿತ್ವದಲ್ಲಿರುವ ಸಮಯದಲ್ಲಿ ಅವನು ಪತ್ನಿಯನ್ನು ಸಂಪರ್ಕಿಸಿರಲಿಲ್ಲವೆಂಬುದನ್ನು ರುಜುವಾತುಪಡಿಸಲು ಪತಿಯು ವಿಫಲನಾಗಿದ್ದಾನೆಯೆಂದು ಅಧಿವಿಚಾರಣಾ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

22. ***ಕರಪಾಯ ಸರ್ವೈ–ವಿರುದ್ಧ–ಮಾಯಂಡಿ***[2] ಪ್ರಕರಣದಲ್ಲಿ ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಅಡಿಯಲ್ಲಿ ಉಪಬಂಧಗಳನ್ನು ಪರಿಗಣಿಸುವಾಗ ಪ್ರೀವಿ ಕೌನ್ಸಿಲ್, "ಸಂಪರ್ಕವೆಂಬ ಪದವು, ವೈವಾಹಿಕ ಸಂಭೋಗಕ್ಕಾಗಿ ಮಾತ್ರ ಅವಕಾಶವಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ. ***ಚಿಲುಕುರಿ ವೆಂಕಟೇಶ್ವರಲು–ವಿರುದ್ಧ–ಚಿಲುಕುರಿ ವೆಂಕಟನಾರಾಯಣ***[3] ಪ್ರಕರಣದಲ್ಲಿ ಅದನ್ನು ಪುನರುಚ್ಚರಿಸಲಾಗಿದ್ದು, ಕೆಲವು ಸಂಗತಿ ಎಂಬ ಅಭಿವ್ಯಕ್ತಿಯನ್ನು, ವಿಧಾನಮಂಡಲವು ನಿಯೋಜಿಸುವ ಆಯ್ಕೆ ಮಾಡಿದಾಗ, ಇತರೇ "ಸಂಗತಿಯು ನಿರ್ಣಾಯಕ ರುಜುವಾತಾಗಿರತಕ್ಕದ್ದು," ಸಾಮಾನ್ಯವಾಗಿ ಪಕ್ಷಕಾರರನ್ನು ಅಂಥ ರುಜುವಾತಿನ ಬೇರ್ಪಡುವಿಕೆಯಿಂದ ದುರ್ಬಲಗೊಳಿಸಿದೆ. ಈ ಅಧಿನಿಯಮದ 4ನೇ ಪ್ರಕರಣದಲ್ಲಿ 'ನಿರ್ಣಾಯಕ ಪೂರ್ವಭಾವನೆ' ಎಂಬ ಅಭಿವ್ಯಕ್ತಿಯ ಪರಿಭಾಷೆಯಿಂದ ಅದನ್ನು ವಿವೇಚಿಸಲಾಗಿದೆ. ಆದರೆ, ನಿರ್ಣಾಯಕತೆಯ ಕಠಿಣತೆಯಿಂದ ತಪ್ಪಿಸಿಕೊಳ್ಳಲು ಇಚ್ಛಿಸಿರುವ ಪಕ್ಷಕಾರನಿಗೆ ಹೊರಕ್ಕೆ ಹೋಗಲು 112ನೇ ಪ್ರಕರಣವೇ ಅವಕಾಶ ನೀಡಿದೆ. ಸದರಿ ತಪ್ಪಿಸಿಕೊಳ್ಳುವ ಅವಕಾಶವು ಮಗು ಜನಿಸಿರಬಹುದಾದ ಆ ಸಮಯದಲ್ಲಿ ಪಕ್ಷಕಾರರು, ಪರಸ್ಪರ ಸಂಪರ್ಕಿಸಿಲ್ಲವೆಂದು ಅದು ತೋರಿಸಿದ್ದಲ್ಲಿ ಪೂರ್ವಭಾವನೆಯನ್ನು ಖಂಡಿಸಲಾಗುತ್ತದೆ. ಬೇರೊಂದು ರೀತಿಯಲ್ಲಿ, ನಿರ್ಣಾಯಕತೆಯನ್ನು ಬಿಟ್ಟು ಹೋಗಲು ಇಚ್ಛಿಸುವ ಪಕ್ಷಕಾರನು ನಕರಾತ್ಮಕವಾಗಿ ತೋರಿಸುವ ಹೊಣೆಯನ್ನು ಹೊಂದಿದ್ದು, ಅವನು ತನ್ನ ಪತ್ನಿಯನ್ನು ಸಂಪರ್ಕಿಸಲು ಅವಕಾಶ ಹೊಂದಿರಲಿಲ್ಲ ಎಂದಷ್ಟೇ ಅಲ್ಲ.

2. ಎಐಆರ್ 1934 ಪಿಸಿ 49
3. ಎಐಆರ್ 1954 ಎಸ್‌ಸಿ 176

ಆದರೆ, ಆಕೆಯೂ ಸುಸಂಬದ್ಧ ಸಮಯದ ಅವಧಿಯಲ್ಲಿ ಅವನನ್ನು ಸಂಪರ್ಕಿಸುವ ಅವಕಾಶ ಹೊಂದಿರಲಿಲ್ಲ. ಸಾಮಾನ್ಯವಾಗಿ, ಇತರ ಸಂದರ್ಭಗಳಲ್ಲಿ ಸಾಕ್ಷ್ಯದ ನಿಯಮವು, ಸಕಾರಾತ್ಮವಾದ ದೃಢಹೇಳಿಕೆಗಳನ್ನು ನೀಡುವ ಪಕ್ಷಕಾರನ ಮೇಲೆ ಹೊಣೆಗಾರಿಕೆ ಇರುತ್ತದೆ ಎಂಬುದಾಗಿದೆ. ಆದರೆ ಈ ಸಂದರ್ಭದಲ್ಲಿ ಹೊಣೆಗಾರಿಕೆಯನ್ನು ನಕಾರಾತ್ಮಕವಾಗಿ ವಾದಿಸಿದ ಪಕ್ಷಕಾರನ ಮೇಲೆ ವಿಧಿಸಿದೆ. ಸಮರ್ಥನ ಕಾರಣವು ಮತ್ತೊಮ್ಮೆ ಶಿಶುವನ್ನು ಜಾರಜಗೊಳಿಸುವ ಕಾನೂನು ಹಿತಾಸಕ್ತಿಯಾಗಿದೆ. ಪೋಷಕರ ಲೋಪಗಳು ಅಥವಾ ತಪ್ಪುಗಳ ಕಾರಣದಿಂದಾಗಿ ಸಾಮಾಜಿಕ ಅಸಮರ್ಥತೆಯನ್ನು ಮಕ್ಕಳು ಸಹಿಸತಕ್ಕದ್ದಲ್ಲ ಎಂಬ ಸಾರ್ವಜನಿಕ ನೀತಿಯು ಸರ್ವಶ್ರೇಷ್ಠವಾಗಿದೆ.

23. ***ಗೌತಮ್ ಕುಂದು–ವಿರುದ್ಧ–ಪಶ್ಚಿಮ ಬಂಗಾಳ ಸರ್ಕಾರ***[4] ಪ್ರಕರಣದಲ್ಲಿ ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸುವಾಗ ಸರ್ವೋಚ್ಛ ನ್ಯಾಯಾಲಯ, ಕೆಳಗಿನಂತೆ ಪ್ಯಾರಾ 24 ಮತ್ತು 26ರಲ್ಲಿರುವಂತೆ ಅಭಿಪ್ರಾಯಪಟ್ಟಿದೆ.

> ''24. ಪೂರ್ವಭಾವನೆ ಇಲ್ಲದಂತೆ ಮಾಡುವ ಸಲುವಾಗಿ ಸಂಪರ್ಕವಿಲ್ಲದ್ದನ್ನು ರುಜುವಾತುಪಡಿಸಲು ಪಕ್ಷಕಾರನ ಪಿತೃತ್ವ ವಿವಾದವನ್ನು ಈ ಪ್ರಕರಣ ಅಗತ್ಯಪಡಿಸುತ್ತದೆ. ಸಂಪರ್ಕವಿದೆ ಮತ್ತು ಸಂಪರ್ಕವಿಲ್ಲವೆಂಬುದರ ಅರ್ಥ, ಲೈಂಗಿಕ ಸಂಭೋಗಕ್ಕಾಗಿ ಅವಕಾಶಗಳ ಇರುವಿಕೆ ಮತ್ತು ಇಲ್ಲದಿರುವಿಕೆ; ಅದು, ವಾಸ್ತವಿಕ ಸಹಜೀವನವೆಂಬಂತೆ ಅರ್ಥೈಸಲಾಗದು.
>
> 26. ಮೇಲಿನ ಚರ್ಚೆಯಿಂದ ತಿಳಿದು ಬರುವುದೇನೆಂದರೆ:–
>
> (1) ಭಾರತದಲ್ಲಿರುವ ನ್ಯಾಯಾಲಯಗಳು, ಸ್ವಾಭಾವಿಕವಾಗಿ ರಕ್ತ ಪರೀಕ್ಷೆಗೆ ಆದೇಶಿಸಲಾಗದು;

4. ಎಐಆರ್ 1993 ಎಸ್‌ಸಿ 2295

(2) ಅರ್ಜಿದಾರರು, ದಾಂಪತ್ಯ ದ್ರೋಹದ ಪ್ರವೃತ್ತಿ ವಿಚಾರಣೆ ಮಾಡುವ ಸಲುವಾಗಿ ಅರ್ಜಿ ಸಲ್ಲಿಸಿರುವಲ್ಲಿ ರಕ್ತ ಪರೀಕ್ಷೆಯ ಮನವಿಯನ್ನು ಪುರಸ್ಕರಿಸಲಾಗದು.

(3) ಪತಿಯು, ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಅಡಿಯಲ್ಲಿ ಉದ್ಭವಿಸಿದ ಪೂರ್ವಭಾವನೆ ಇಲ್ಲದಂತೆ ಮಾಡುವ ಸಲುವಾಗಿ ಸಂಪರ್ಕವಿಲ್ಲದಿರುವುದನ್ನು ರುಜುವಾತುಪಡಿಸಬೇಕು ಎಂಬುದು ಮೇಲ್ನೋಟಕ್ಕೆ ಬಲವಾದ ವಾದವಾಗಿದೆ.

(4) ರಕ್ತದ ಪರೀಕ್ಷೆಗೆ ಆದೇಶಿಸಿದ ಪರಿಣಾಮವೇನಾಗುತ್ತದೆಂದು ನ್ಯಾಯಾಲಯ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ; ಅದು, ಮಗುವಿಗೆ ಜಾರಜನೆಂದು ಮತ್ತು ತಾಯಿ ಶೀಲಭ್ರಷ್ಟಳೆಂದು ಹೆಸರು ಬರುವುದಕ್ಕೆ ಕಾರಣವಾಗುತ್ತದೆಯೇ?

(5) ವಿಶ್ಲೇಷಣೆಗಾಗಿ ರಕ್ತದ ಮಾದರಿಯನ್ನು ನೀಡಲು ಯಾರನ್ನೂ ಒತ್ತಾಯಿಸಬಾರದು."

24. ***ನಂದಲಾಲ್ ವಸುದೇವ್ ಬದ್‌ವೈಕ್ –ವಿರುದ್ಧ– ಲತಾ ನಂದಲಾಲ್ ಬದ್‌ವೈಕ್ ಮತ್ತು ಇನ್ನೊಬ್ಬರು (ಮೇಲಿನ)*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಹೇಳಲಾದ ಕಾನೂನು ತತ್ವಗಳೊಂದಿಗೆ ಒಪ್ಪಂದದಲ್ಲಿರುವಂತೆ ಈ ನ್ಯಾಯಾಲಯವು, ಅರ್ಜಿದಾರನ ಪರವಾದ ಮಾನ್ಯ ನ್ಯಾಯವಾದಿಯ ಮೇಲೆ ಅವಲಂಬಿಸಿದೆ. ಆದರೆ ಆ ಪ್ರಕರಣದ ಸಂಗತಿಗಳು, ಪ್ರಸ್ತುತ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳಿಗೆ ಅನ್ವಯಿಸುವುದಿಲ್ಲ. ಮೇಲೆ ಹೇಳಲಾದ ಬದವೈಕ್ ಪ್ರಕರಣದಲ್ಲಿ, ಅಂಗೀಕರಿಸಲಾದಂತೆ, ಪತ್ನಿಯು ಗರ್ಭಿಣಿಯಾಗುವುದಕ್ಕಿಂತ ಮುಂಚೆಯೇ ಪತಿ ಮತ್ತು ಪತ್ನಿಯು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಮತ್ತು ಜೀವನಾಂಶಕ್ಕಾಗಿ ಪತ್ನಿಯು ದಾಖಲು ಮಾಡಿದ್ದ 1ನೇ ಅರ್ಜಿಯನ್ನು ದಿನಾಂಕ 10.12.1993 ರಂದು ವಜಾಗೊಳಿಸಲಾಗಿದೆ. ಪತ್ನಿಯು, ದಿನಾಂಕ 20.06.1996 ರಿಂದ ತನ್ನ ಪತಿಯೊಂದಿಗೆ ವಾಸಿಸುತ್ತಿರುವುದಾಗಿ ಮತ್ತು ಸುಮಾರು ಎರಡು ವರ್ಷಗಳು ಅವನೊಂದಿಗೆ

ಇದ್ದುದಾಗಿ ಮತ್ತು ಆ ಅವಧಿಯಲ್ಲಿ ತಾನು ಗರ್ಭಿಣಿಯಾದುದಾಗಿ ಹೇಳಲಾಗಿದ್ದು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಅಡಿಯಲ್ಲಿ ಹೊಸ ಜೀವನಾಂಶ ವ್ಯವಹರಣೆಗಳಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸಿದ್ದಾರೆ. ಇದು, ಪುನರ್ಮಿಲನ ಮತ್ತು ಸಹಜೀವನ ಪ್ರಕರಣವಾಗಿದೆ. ಆ ಪ್ರಕರಣದಲ್ಲಿ, ಸಮನ್ವಯ ಪೀಠದಿಂದ ಡಿಎನ್‌ಎ ಪರೀಕ್ಷೆಗಾಗಿ ಆದೇಶವನ್ನು ಅದಾಗಲೇ ಜಾರಿ ಮಾಡಲಾಗಿತ್ತು. ಪ್ರಸ್ತುತ ಪ್ರಕರಣದಲ್ಲಿ, ಪ್ರತಿವಾದಿಗಳು, ಪತ್ನಿ ಮತ್ತು ಮಗಳಾಗಿದ್ದಾರೆಂದು, ಕೌಟುಂಬಿಕ ನ್ಯಾಯಾಲಯದಿಂದ ಜೀವನಾಂಶಕ್ಕಾಗಿ ಕ್ಲೇಮು ಮಾಡಲಾಗಿದ್ದು, ಆರ್‌ಪಿಎಫ್‌ಸಿ ಸಂ.308/2012ರಲ್ಲಿ ಈ ನ್ಯಾಯಾಲಯದಿಂದ ಅದನ್ನು ಸ್ಥಿರಪಡಿಸಲಾಗಿದ್ದು ಅಂತಿಮ ಹಂತದಲ್ಲಿದೆ. ಆದ್ದರಿಂದ, ಸದರಿ ತೀರ್ಮಾನವು ಪ್ರಸ್ತುತ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳಿಗೆ ಅನ್ವಯಿಸುವುದಿಲ್ಲ.

25. ಅಧಿವಿಚಾರಣಾ ನ್ಯಾಯಾಲಯವು, ಡಿಎನ್‌ಎ ಪರೀಕ್ಷೆ ನಡೆಸುವುದಕ್ಕೆ ಕೋರ್ಟ್ ಕಮೀಷನರ್ ನೇಮಕಾತಿಗಾಗಿ ಅರ್ಜಿಯನ್ನು ಪರಿಗಣಿಸಿರುವಾಗ, ಪ್ರಸ್ತುತ ಅರ್ಜಿದಾರನು ಕ್ರಿಮಿನಲ್ ಸಂಕೀರ್ಣ ಸಂ.330/2010ರಲ್ಲಿ, ವಿವಾಹ ಜೀವನವನ್ನು ಮುಂದುವರೆಸಲು ಪ್ರತಿವಾದಿಗಳನ್ನು (ಪತ್ನಿ ಮತ್ತು ಮಗಳು) ಹಿಂದಕ್ಕೆ ಕರೆಸಿಕೊಳ್ಳಲು ಅವನು ಸಿದ್ಧವಾಗಿದ್ದನು ಎಂಬುದನ್ನು ಪಾಟೀಸಾವಲಿನಲ್ಲಿ ಒಪ್ಪಿಕೊಂಡಿದ್ದಾನೆ ಎಂಬುದಾಗಿ ನಿರ್ಣಯವನ್ನು ದಾಖಲಿಸಲಾಗಿದೆ ಮತ್ತು 1ನೇ ಪ್ರತಿವಾದಿಯು ತನ್ನ ಮಗಳು ಅಲ್ಲವೆಂಬ ವಿವಾದಕ್ಕೆ ಸಂಬಂಧಪಟ್ಟ ವಾದವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದ ಅಡಿಯಲ್ಲಿ ದಾಖಲು ಮಾಡಿದ ಅರ್ಜಿಯನ್ನು ತೀರ್ಮಾನಿಸುವ ಮೂಲಕ ಕೌಟುಂಬಿಕ ನ್ಯಾಯಾಲಯವು ರದ್ದುಪಡಿಸಿದೆ. ಅದನ್ನು, ಅಂತಿಮ ಮತ್ತು ನಿರ್ಣಾಯಕವಾಗಿ ಆರ್‌ಪಿಎಫ್‌ಸಿ ಸಂ.308/2012ರಲ್ಲಿ ಈ ನ್ಯಾಯಾಲಯದಿಂದ ಸ್ಥಿರೀಕರಿಸಲಾಗಿದೆ. ಉಭಯ ಪಕ್ಷಕಾರರ ಸಾಕ್ಷ್ಯವನ್ನು ನಿರ್ಣಾಯಕಗೊಳಿಸಲಾಗಿದೆ ಮತ್ತು ಆ ವಿಷಯವನ್ನು ವಾದಕ್ಕಾಗಿ ಮುಂದಕ್ಕೆ ಹಾಕಲಾಗಿದೆ, ವಾದಿಯು ಆ ಹಂತದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 10ಎ ಅಡಿಯಲ್ಲಿ ಪ್ರಸ್ತುತ ಅರ್ಜಿಯನ್ನು ದಾಖಲು ಮಾಡಿದ್ದು, ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಪೂರ್ವಭಾವನೆ ಇಲ್ಲದಂತೆ ಮಾಡುವ ಸಲುವಾಗಿ, ಸಂಪರ್ಕವಿರಲಿಲ್ಲವೆಂಬುದನ್ನು

ರುಜುವಾತುಪಡಿಸಲು ಪಿತೃತ್ವವನ್ನು ವಿವಾದಿಸುವ ಪಕ್ಷಕಾರರನ್ನು ಅಗತ್ಯಪಡಿಸುತ್ತದೆ ಎಂದು ನಿರ್ಣಯವನ್ನು ಸಹ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದೆ. ಸದರಿ ಪೂರ್ವಭಾವನೆಯು ಖಂಡಿಸುವ ಪೂರ್ವಭಾವನೆಯಾಗಿದೆ. ಆದ್ದರಿಂದ, ವಾದಿಯು, ಅರ್ಜಿಯನ್ನು ಅಂಗೀಕರಿಸುವ ಯಾವುದೇ ಕಾರಣ ನೀಡಿರುವುದಿಲ್ಲ ಮತ್ತು ಬೈಲಾಜಿಕಲ್ ತಂದೆಯನ್ನು ನಿರ್ಣಯಿಸುವುದಕ್ಕೆ ಡಿಎನ್ಎ ಪರೀಕ್ಷೆಯ ವೈದ್ಯಕೀಯ ಪರೀಕ್ಷೆಗೆ ಒಳಗಾಗಲು ಪಕ್ಷಕಾರನಿಗೆ ನಿರ್ದೇಶಿಸಲಾಗಿದೆ ಮತ್ತು ಅದಕ್ಕನುಸಾರವಾಗಿ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಈ ಹಿಂದಿನ ಕಾರಣಗಳ ದೃಷ್ಟಿಯಿಂದ, ರಿಟ್ ಅರ್ಜಿಯಲ್ಲಿ ಎತ್ತಲಾದ ಪ್ರಶ್ನೆಗೆ ಅಧಿವಿಚಾರಣಾ ನ್ಯಾಯಾಲಯವು, ವಾದಿಯಿಂದ ದಾಖಲು ಮಾಡಿದ ಅರ್ಜಿಯನ್ನು ತಿರಸ್ಕರಿಸಿರುವುದನ್ನು ಸಮರ್ಥಿಸಿಕೊಳ್ಳಲಾಗಿದೆಯೆಂದು ಅಭಿಪ್ರಾಯಪಟ್ಟು ಸ್ಥಿರೀಕರಿಸಿ ಉತ್ತರಿಸಬೇಕಿದೆ.

26. ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿನ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ವಾದಿಯು ಅದರಲ್ಲಿ ಕೋರಿರುವ ಮನವಿಯನ್ನು ನೀಡಲು ಯಾವುದೇ ವಾದವನ್ನು ಮಾಡಿಲ್ಲವೆಂದು ನಿರ್ದಿಷ್ಟವಾಗಿ ನಿರ್ಣಯವನ್ನು ದಾಖಲಿಸಿದೆ. ಅಂಗೀಕರಿಸಲಾದಂತೆ, ಪ್ರಸ್ತುತ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳಲ್ಲಿ, ವಾದಿಯು, ಭಾರತ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಉದ್ಭವಿಸಿದ ಪೂರ್ವಭಾವನೆಯನ್ನು ಇಲ್ಲದಂತೆ ಮಾಡುವ ದೃಷ್ಟಿಯಿಂದ 1ನೇ ಪ್ರತಿವಾದಿಗೆ ಜನ್ಮ ನೀಡಿದ ಯಾವುದೇ ಸಮಯದಲ್ಲಿ ಅವನು, ಅವನ ಪತ್ನಿಯನ್ನು ಸಂಪರ್ಕಿಸಿರಲಿಲ್ಲವೆಂದು ರುಜುವಾತುಪಡಿಸಲು ವಿಫಲನಾಗಿದ್ದಾನೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅನೇಕ ಸಂದರ್ಭಗಳಲ್ಲಿ ಸಾಮಾನ್ಯವಾಗಿ ರಕ್ತ ಪರೀಕ್ಷೆಗೆ ಆದೇಶಿಸಲಾಗದು ಮತ್ತು ದಾಂಪತ್ಯ ದ್ರೋಹ ಪ್ರವೃತ್ತಿ ವಿಚಾರಣೆ ಮಾಡುವ ದೃಷ್ಟಿಯಿಂದ ಅಂಥ ಮನವಿಗಳಿಗಾಗಿ ಅರ್ಜಿಗಳನ್ನು ಹಾಕಿರುವಾಗ, ರಕ್ತ ಪರೀಕ್ಷೆಗಾಗಿನ ಮನವಿಯನ್ನು ಪುರಸ್ಕರಿಸಲಾಗದು. ಪ್ರಸ್ತುತ ಪ್ರಕರಣದಲ್ಲಿ, ವಾದಿ ಮತ್ತು 2ನೇ ಪ್ರತಿವಾದಿಯ ನಡುವೆ ವಿಧಿಸಮ್ಮತ ವಿವಾಹ ಇರುವ ದೃಷ್ಟಿಯಿಂದ, 1ನೇ ಪ್ರತಿವಾದಿಯು ಹುಟ್ಟಿದ್ದು, ಅರ್ಜಿದಾರನು ಈ ಅರ್ಜಿಯನ್ನು ಪುರಸ್ಕರಿಸುವ ಯಾವುದೇ ವಿಶೇಷ ಸಂದರ್ಭಗಳನ್ನು ನೀಡಿ ವಾದಿಸಿರುವುದಿಲ್ಲ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯ ಮಾಡಿದ ಪ್ರಶ್ನಿತ ಆದೇಶವು ನ್ಯಾಯಸಮ್ಮತ

ಮತ್ತು ಯುಕ್ತವಾಗಿದ್ದು, ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿ ಹಸ್ತಕ್ಷೇಪ ಮಾಡಲಾಗದು. ಅದಕ್ಕನುಸಾರವಾಗಿ ಈ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.

ಹಾಗಾಗಿ, ಅಧಿವಿಚಾರಣಾ ನ್ಯಾಯಾಲಯ ಮತ್ತು ಈ ನ್ಯಾಯಾಲಯವು ಮಧ್ಯಕಾಲೀನ ಅರ್ಜಿಯನ್ನು ನಿರ್ಧರಿಸುವಾಗ ಮಾಡಿದ ಯಾವುದೇ ಅಭಿಪ್ರಾಯೋಕ್ತಿಯು, ಕಾನೂನಿಗೆ ಅನುಸಾರವಾಗಿ ಅರ್ಜಿಯ ಗುಣಾರ್ಹತೆಗಳ ಮೇಲೆ ಆ ವಿಷಯವನ್ನು ನಿರ್ಧರಿಸುವಾಗ ಅಧಿವಿಚಾರಣಾ ನ್ಯಾಯಾಲಯದ ಮೇಲೆ ಯಾವುದೇ ರೀತಿಯ ಪ್ರಭಾವ ಬೀರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ತದನುಸಾರವಾಗಿ ಆದೇಶಿಸಲಾಗಿದೆ.